**ಕವಿತೆ**



**ಪಿ.ಬಿ. ಪ್ರಸನ್ನ**

ಕಲೆ: ಎಸ್.ವಿ. ಹೂಗಾರ್



# ಮಬ್ಬು

ಮನೆಯಲ್ಲಿ ಇತ್ತಿತ್ತಲಾಗಿ
ಹಗಲಲ್ಲೇ ನಡೆವಾಗ ತಡವರಿಕೆ
ಏರುವುದು ಬಿಡಿ
ಇಳಿಯಲೂ ಕೈಹಿಡಿ
ಯ ಬೇಕಾಗುತ್ತದೆ ಅಥವಾ
ಗೋಡೆಯಾದರೂ

ನಡು ಮನೆಯಲ್ಲಿ
ಬಂದವರು ಯಾರು
ಕೂತಿದ್ದು ಒಂದಿಷ್ಟು ಹೊತ್ತು
ಆಡಿ ಹೋದವರು ಯಾರು
ತಿಳಿಯುವುದೇ ಇಲ್ಲ

ನಗದಿದ್ದರೂ ನಾನು ನಕ್ಕು
ಅಳದಿದ್ದರೂ ನಾನು ಅತ್ತು
ಒಟ್ಟಾರೆ ಆಭಾಸ

ಹೊತ್ತೇರಿದ್ದು ನನಗೆ ಮಾತ್ರವೇ?
ಅಥವಾ
ಎಲ್ಲೆಡೆಯೂ ಮುಸ್ಸಂಜೆಯೇ?
ಸೂರ್ಯ ಮುಳುಗುವುದು ಕಂಡು
ಸಂಭ್ರಮಿಸುವರು ಯಾಕೆ?
ಕೇಳಿದವರೆಲ್ಲ ನುಡಿಯುತ್ತಾರೆ
'ನಿಮ್ಮ ಕಣ್ಣಿಗಡರಿದೆ
ಪರದೆ
ಸರಿಪಡಿಸಿಕೊಳ್ಳಿ
ಮಂಜು ತಿಳಿಯಾಗಿ
ನೋಟ ಹಸಿರಾಗಬಹುದು

ಮುಸ್ಸಂಜೆಗಲ್ಲವೇ
ಹೊಸತಾರೆ
ಹುಣ್ಣಿಮೆಯ ತಿಂಗಳು
ಎಲ್ಲ ಮೂಡುವುದು?
ಬಿರಿಯುವುದು ಪಾರಿಜಾತ
ಅರಳುವುದು ಸಂಜೆ ಮಲ್ಲಿಗೆ
ತೆರೆದುಕೊಳ್ಳಿ ಅವುಗಳ ಲೋಕಕ್ಕೆ

ಮುಸ್ಸಂಜೆ ಸವಿಯಾಗ ಬಹುದು ನಿಮಗೆ
ಮಬ್ಬು ಮಬ್ಬೇ ಆಗುವುದಿಲ್ಲ ನಿಮಗೆ'

ಮಬ್ಬು ತಿಳಿಯಾಗಿಸಲು
ಈಗ
ಆಗಾಗ ಕಣ್ಣ ಉಜ್ಜುತ್ತ
ಹೆಜ್ಜೆ ಹಾಕುತ್ತಿದ್ದೇನೆ